**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 613-2019**

| | | |
|---|---|---|
| ಸಾಕ್ಷಿಯ ಹೆಸರುಃ | ಸಣ್ಣಸ್ವಾಮಿ | ಪ್ರಾ.ಸಾಃಃ 03 |
| ತಂದೆ/ಗಂಡನ ಹೆಸರುಃ | ಸಣ್ಣತಮ್ಮಯ್ಯ | ಚಾಸಾಃಃ 02 |
| ವಯಸ್ಸುಃ | ವರ್ಷ 45 | ಪ್ರಮಾಣೀಕರಿಸಿದ ದಿಃ 11.02.2020 |
| ಉದ್ಯೋಗಃ | ಆಹಾರ ನಿರೀಕ್ಷಕರು, ಪಿರಿಯಾಪಟ್ಟಣ | |
| ವಾಸ ಸ್ಥಳಃ | ಟಿ.ನರಸೀಪುರ | |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

2012 ನೇ ಸಾಲಿನಿಂದ 2019 ರ ಸೆಪ್ಟೆಂಬರ್ 2019 ರವರೆಗೆ ಆಹಾರ ನಿರೀಕ್ಷಕರು, ಪಿರಿಯಾಪಟ್ಟಣ ಕಾರ್ಯ ನಿವರ್ಹಿಸಿರುತ್ತೇನೆ.

ದಿನಾಂಕಃ 18.6.2016 ರಂದು ಪಿರಿಯಾಪ್ಟಣ ತಾ. ಬೆಟ್ಟದಪುರ ವ್ಯಾಪ್ರಿಯಲ್ಲಿ ಇಲಾಖೆಗೆ ಸಂಬಂಧಿಪಟ್ಟ ವಿಷಯಗಳ ಮೇಲೆ ಪರಿಶೀಲನೆ ನಡೆಸುತ್ತಿರುವ ವೇಳೆ ಬೆಟ್ಟದಪುರ ಹೋಬಳಿ , ಅತ್ತಿಗೂಡು ಗ್ರಾಮದಲ್ಲಿ ಪ್ರಕಾಶಶೆಟ್ಟಿ ಎಂಬುವವರ ಮಗ ಪ್ರಶಾಂತ ಎಂಬುವವರು ಸರ್ಕಾರ ಅನ್ಯಭಾಗ್ಯ ಯೋಜನೆಯಲ್ಲಿ ಪಡಿತರ ಚೀಟಿಯಲ್ಲಿ ಬಿಡುಗಡೆ ಮಾಡಿರುವ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ ಅವರ ಮನೆಯಲ್ಲಿ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಮಾಹಿತಿಯ ಮೇರೆಗೆ ಪ್ರಾಸಾ-02 ರವರು ತಕ್ಷಣ ಪಿರಿಯಾಪಟ್ಟಣ ತಾಲ್ಲೂಕಿನ ನನಗೆ ಚಾಸಾ-3 ರವರಿಗೆ ಮಾಹಿತಿ ನೀಡಿ ಅತ್ತಿಗೋಡಿನಲ್ಲಿ ದಾಳಿ ನಡೆಸಲು ಸಹಕರಿಸಲು ಸೂಚಿಸಿದ್ದು, ನಂತರ ಪ್ರಾಸಾ-01 ಆರೋಪಿಯ ಮನೆಯ ಪತ್ತೇ ಹಚ್ಚಿ ಅಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದಾಗ, ಪ್ರಾಸಾ-01 ಇದ್ದ ಅತ್ತಿಗೋಡು ಸ್ಥಳಕ್ಕೆ ಅವರಿಬ್ಬರೂ, ಪಂಚರರಾದ ಪ್ರಾಸಾ-01, ಚಾಸಾ-5 ಮತ್ತು 06 ರವರನ್ನು ಸಹ ಕರೆದುಕೊಂಡು ಸಮಯ ಮಃ 2.30 ಗಂಟೆಗೆ ಬಂದಿರುತ್ತಾರೆ. ನಂತರ ದಾಳಿಯ ವಿಷಯವನ್ನು ನನಗೆ, ಪ್ರಾಸಾ -1, ಚಾಸಾ-03, 5 ಮತ್ತು 6 ರವರಿಗೆ ತಿಳಿಸಿ ಅವರೊಂದಿಗೆ ಅತ್ತಿಗೋಡಿನ ಕೇರಳಾಪುರ ರಸ್ತೆಯಲ್ಲಿರುವ ಮಾಹಿತಿ ಇದ್ದ ಒಂದು ಮನೆಯ ಮೇಲೆ ದಾಳಿ ಮಾಡಿ ಆಗ ಮನೆಯ ಮುಂದೆ ಒಂದು ಬೊಲೆರೋ ವಾಹನ ಸಂಖ್ಯೆಃ ಕೆಎ 45-5143 ಅಲ್ಲಿ ನಿಂತಿದ್ದು, ಅದನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ತುಂಬಿದ ಚೀಲಗಳಿದ್ದು, ಮನೆಯಲ್ಲಿ ಯಾರು ಮಾಲೀಕರಿದ್ದೀರಿ ಎಂದು ಕೇಳಿದಾಗ ಆರೋಪಿ ಪ್ರಶಾಂತ್ ರವರು ಈ ಮನೆಯ ಮಾಲೀಕ ಎಂದು ತಿಳಿಸಿದ್ದು, ಬೊಲೇರೋ ವಾಹನದಲ್ಲಿ ಅಕ್ಕಿ, ಹಾಗೂ ಗೋದಿ ಇರುವುದನ್ನು ತಿಳಿಸಿರುತ್ತಾರೆ. ಈ ಅಕ್ಕಿ ಯಾವುದು ಎಂದು ಕೇಳಿದಾಗ ಆರೊಪಿಯು ಚಿಕ್ಕಹನುಸೋಗೆ-ದೊಡ್ಡಹನುಸೋಗೆ ಗ್ರಾಮದ ಪಡಿತರ ಚೀಟಿದಾರರಿಂದ ಪ್ರತಿ ಕೆ.ಜಿ.ಗೆ 8 ರಿಂದ 10 ರೂ. ಗಳಂತೆ ಖರೀದಿ ಮಾಡಿ, ಅದನ್ನು ನುಚ್ಚು ಮಾಡಿ ಪಶುಆಹಾರವನ್ನಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತಂದಿರುತ್ತೇನೆ ಎಂದು ತಿಳಿಸಿರುತ್ತಾರೆ.

ಆಗ ವಾಹನವನ್ನು ಪರಿಶೀಲಿಸಿದಾಗ 13 ಚೀಲದಲ್ಲಿ ಅಕ್ಕಿ, 11 ಚೀಲದಲ್ಲಿ ಗೋಧಿ ಇರುವುದು ಕಂಡು ಬಂದಿರುತ್ತದೆ. ಅನಂತರ ಮನೆಯನ್ನು ಪರಿಶೀಲಿಸಿದಾಗ ಅಲ್ಲಿ ಕೋಣೆಗಳಲ್ಲಿ 11 ಚೀಲ ಅಕ್ಕಿ, 16 ಚೀಲ ಗೋಧಿ ಇರುವುದು ಕಂಡು ಬಂದಿರುತ್ತದೆ. ಅಂತೆಯೇ ಅವರ ಬಳಿ ಎರಡು ಎಲೆಕ್ಟ್ರಾನಿಕ್ ವಿದ್ಯೂಮ್ಮಾನ ತೂಕಮಾಪಕ ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ತೂಕ ಮಾಡಿ ನೋಡಿರುತ್ತೇವೆ.

ನಂತರ ಸದರಿ ಕೃತ್ಯವೂ ಕಾನೂನು ಬಾಹೀರವಾಗಿದ್ದರಿಂದ, 02.45 ರಿಂದ 5 ರವರೆಗೆ ಮಹಜರ್ ಕ್ರಮವನ್ನು ನಾನು ಮತ್ತು ಚಾಸಾ-02, 4 ರಿಂದ 06, ಪ್ರಾಸಾ-01 ರವರ ಸಮಕ್ಷಮ ಜರುಗಿಸಿ, ಆರೋಪಿಯ ವಶದಿಂದ ಬೊಲೇರೋ ವಾಹನ ಮತ್ತು ಎಲೆಕ್ಟ್ರಾನಿಕ್ ವಿದ್ಯೂಮ್ಮಾನ ತೂಕಮಾಪಕ, 24 ಚೀಲ ಅಕ್ಕಿ, 27 ಚೀಲ ಗೋಧಿಯನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು ಚೀಲಗಳಿಂದ ಮಾದರಿಗಾಗಿ ತಲಾ ½ ಕೆ.ಜಿ.ಯ 4 ಪ್ಯಾಕೆಟ್ಗಳನ್ನು ತೆಗೆದು, ಅದರಲ್ಲಿ ತಲಾ 2 ಪ್ಯಾಕೆಟ್ಗಳನ್ನು ಪೊಲೀಸ್ ರವರಿಗೆ ದೂರು ನೀಡುವ ಸಂದರ್ಭದಲ್ಲಿ ಹಾಜರುಪಡಿಸಿರುತ್ತಾರೆ. ಸದರಿ ಸಂದರ್ಬದಲ್ಲಿ ಸ್ಯಾಂಪಲ್ಲಾಗಿ ತೆಗೆದ ಪ್ಯಾಕೆಟ್ಗಳನ್ನು ಬಿಳಿ ಪಟ್ಟೆಯಿಂದ ಸುತ್ತಿ ಅರಗು ಹಾಕಿ **ಪಿಆರ್ ಒ** ಎಂಬ ಅಕ್ಷರಗಳಿಂದ ಸೀಲು ಹಾಕಿ, ಬಿಳಿ ಹಾಳೆಯ ಮೇಲೆ ಪಂಚರರ ಸಹಿಗಳನ್ನು ಪಡೆದು ಅಂಟಿಸಿರುತ್ತಾರೆ. ಉಳಿದ ತಲಾ 2 ಪ್ಯಾಕೆಟ್ಗಳನ್ನು ನಮ್ಮ ವಶದಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಹಾಜರುಪಡಿಸುವ ಉದ್ದೇಶದಿಂದ ಇರಿಸಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ಸ್ಥಳದಲ್ಲಿ ಆರೋಪಿಯ ಹೆಳಿಕೆಯನ್ನು ನೀಡಿರುತ್ತಾರೆ. ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು , ಎರಡು ತೂಕಮಾಪಕವನ್ನು ಪಿರಿಯಾಪಟ್ಟಣ, ಟಿ.ಎ.ಪಿ.ಸಿ.ಎಂ.ಎಸ್. ಕಾರ್ಯಾದರ್ಶಿರವರಿಗೆ ಭದ್ರತೆಯ ದೃಷ್ಟಿಯಿಂದ ವಹಿಸಿ ಸ್ವೀಕೃತಿಯನ್ನು ಪ್ರಾಸಾ-02 ರವರು ಪಡೆದಿರುತ್ತಾರೆ. ನಂತರ ವಾಹನ ಮತ್ತು ತಲಾ ಎರಡು ಸ್ಯಾಂಪಲ್ ಪ್ಯಾಕೆಟ್ಗಳನ್ನು ಬೆಟ್ಟದಪುರ ಪೊಲೀಸರ ವಶಕ್ಕೆ ಪ್ರಾಸಾ-02 ರವರನೀಡಿರುತ್ತಾರೆ. ನಂತರ ಬೆಟ್ಟದಪುರ ಪೋಲೀಸ್ ಠಾಣೆಗೆ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ದೂರನ್ನು ನೀಡಿರುತ್ತಾರೆ. ನಂತರ ವಾಹನ ಮತ್ತು ಮಾದರಿ ಪ್ಯಾಕೆಟ್ಗಳನ್ನು ಪಂಚರರಾದ ಚಾಸಾ-13 ಮತ್ತು ಚಾಸಾ-16 ರವರ ಸಮಕ್ಷಮ ಪೊಲೀಸರು ಮಹಜರ್ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಬೆಟ್ಟದಪುರ ಪೊಲೀಸರು ಮುಂದಿನ ಕ್ರಮವನ್ನು ಜರುಗಿಸಿರುತ್ತಾರೆ.

ಸಾಕ್ಷಿಯು ಸ್ಥಳ ಪಂಚನಾಮೆ, ನಿ.ಪಿ.01 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.01 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.01(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.02 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.02(ಬಿ) ಎಂದು ಗುರುತಿಸಲಾಯಿತು. ಟಿ.ಎ.ಪಿ.ಸಿ.ಎಂ.ಎಸ್. ರವರು ನೀಡಿದ ದಾಸ್ತಾನು ಸ್ವೀಕೃತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.03 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.03(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಪ್ರಾಸಾ-01, ಚಾಸಾ-03 ರವರು ಸೇರಿ ನೀಡಿದ ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.04 ಎಂದು

ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.04(ಬಿ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿದ ಬೊಲೇರೋ ವಾಹನದ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.06 ಎಂದು ಗುರುತಿಸಲಾಗಿದೆ, ಸದರಿ ಭಾವ ಚಿತ್ರಕ್ಕೆ ಸಂಬಂಧಿಸಿದ ಸಿ.ಡಿ.ಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಲೇ ನಿ.ಪಿ.07 ಎಂದು ಗುರುತಿಸಲಾಗಿದೆ.

ಮಾದರಿಗಾಗಿ ವಶಪಡಿಸಿಕೊಂಡ ತಲಾ ಎರಡು ಅಕ್ಕಿಯ ಮತ್ತು ಗೋದಿಯ ಪ್ಯಾಕೆಟ್ಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.01 ರಿಂದ 04 ಎಂದು ಗುರುತಿಸಲಾಗಿದೆ. ವಶಪಡಿಸಿಕೊಂಡ ಉಳಿದ ಅಕ್ಕಿ ಮತ್ತು ಗೋಧಿಯ ಮೂಟೆಗಳನ್ನು, ತೂಕಮಾಪಕಗಳನ್ನು ನೋಡಿದರೆ ಗುರುತಿಸುತ್ತೇನೆ. ಅಕ್ಕಿ ಮತ್ತು ಗೋಧಿಯ ಮೂಟೆಗಳನ್ನು, ಅವುಗಳು ನಶಿಸುವ ಸಂಭವ ಇರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ವಿಲೇ ಮಾಡಿರುತ್ತೇವೆ. ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ.ಎಸ್.ಎಂ. ವಕೀಲರಿಂದಃ</u>

ಕೃತ್ಯ ಸ್ಥಳದಲ್ಲಿ ಅಕ್ಕಿ ಮತ್ತು ಗೋಧಿ ಇರುವ ವಿಷಯವನ್ನು ಆರೋಪಿಯೇ ನಮಗೆ ತಿಳಿಸಿರುತ್ತಾರೆ. ಆರೋಪಿ ಸದರಿ ವಸ್ತುಗಳನ್ನು ಖರೀದಿ ಮಾಡುವ ಸಂದರ್ಭದಲ್ಲಿ ಅವರು ಬೇರೆ ವ್ಯಾಪ್ತಿಯಲ್ಲಿ ಖರೀದಿ ಮಾಡಿದ್ದರಿಂದ ನಮಗೆ ಸೂಕ್ತ ಮಾಹಿತಿ ಬಂದಿರುವುದಿಲ್ಲ. ಆರೋಪಿಯೇ ಕೆ.ಆರ್. ನಗರದಿಂದ ಖರೀದಿ ಮಾಡಿರುವುದಾಗಿ ನಮಗೆ ತಿಳಿಸಿರುತ್ತಾರೆ. ಆರೋಪಿಯನ್ನು ಹೊರತುಪಡಿಸಿ, ಬೇರೆ ಯಾವ ಸಾಕ್ಷಿದಾರರನ್ನು ಹಾಗೂ ನಮ್ಮ ಇಲಾಖೆಯಿಂದ ಸದರಿ ವಿಚಾರವನ್ನು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ದಾಳಿ ಸಂದರ್ಬದಲ್ಲಿ ನಾವು ಅಧಿಕಾರಿಗಳನ್ನು ಹೊರತುಪಡಿಸಿ ಸಾರ್ವಜನಿಕಾರು ಯಾರು ಸ್ಥಳದಲ್ಲಿ ಕಂಡು ಬಂದಿರುವುದಿಲ್ಲ. ಆರೋಪಿತರು ತೆಗೆದುಕೊಂಡು ಹೋಗುತ್ತಿದ್ದ ಅಕ್ಕಿ ಹಾಗೂ ಗೋಧಿ ಆಹಾರ ಇಲಾಖೆಗೆ ಸೇರಿರುವುದಿಲ್ಲ ಹಾಗೂ ಪಡಿತರ ಚೀಟಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯ ವಿರುದ್ದ ಸುಳ್ಳು ದಾಖಲಾತಿಗಳ ಮೇಲೆ ಸುಳ್ಳು ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಅಮಾನತ್ತುಪಡಿಸಿಕೊಂಡ ಅಕ್ಕಿ ಹಾಗೂ ಗೋಧಿ ಎಲ್ಲಾ ಕಡೆಯೂ ಸಿಗುತ್ತದೆ ಎಂದರೆ ಸರಿ. ಸದರಿ ವಸ್ತುಗಳು ಪಡಿತರ ಚೀಟಿಯ ಮೂಲಕವೇ ನೀಡಿರುವಂತಹದ್ದು ಎಂದು ತೋರಿಸಲು ಯಾವುದೇ ವರದಿಯನ್ನು ದಾಖಲೆಯೊಂದಿಗೆ ನೀಡಿರುವುದಿಲ್ಲ. ಆರೋಪಿ ಆಹಾರ ಇಲಾಖೆಯಿಂದ ಅಕ್ಕಿ ಮತ್ತು ಗೋಧಿಯನ್ನು 8 ರಿಂದ 10 ರೂಪಾಯಿಗಳಿಗೆ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಂತೆಯೇ ಆರೋಪಿಗಳು ಯಾವುದೇ ಕಾಳಸಂತೆಯಲ್ಲಿ ಮಾರಾಟ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹುರುಳಿಕಾಳು, ಅವರೇಕಾಳು, ಹಲಸಂದೆ ಗಳನ್ನು ಪಿರಿಯಪಟ್ಟಣದಿಂದ ಖರೀದಿ ಮಾಡಿ ಮೈಸೂರಿನಲ್ಲಿ ಮಾರಾಟ ಮಾಡುವ ವ್ಯಕ್ತಿ ಎಂದರೆ ಸರಿಯಲ್ಲ. ನಿ.ಪಿ. 1 ನ್ನು ನಾವೇ ಸೃಷ್ಟಿಸಿದ್ದು ಯಾವ ಪಂಚರರ ಸಮಕ್ಷಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.01 ಕ್ಕೆ ದಿನಾಂಕಃ 18.06.2016 ರಂದು ಮಧ್ಯಾಹ್ನ 12.45 ರಿಂದ 5.45 ಗಂಟೆಯವರೆಗೆ ಜರುಗಿಸಿರುತ್ತೇವೆ. ಸದರಿ ಸ್ಥಳದ

ಚೆಕ್ಕು ಬಂದಿ ಪೂಃ ಆರೋಪಿಯ ಅಂಕಣ, ಪಃ ಆರೋಪಿಯ ತರಕಾರಿ ಶೆಡ್ಡು, ದಃ ದಾರಿ, ಉಃ ಜಮೀನು ಇರುತ್ತದೆ. ನಿ.ಪಿ.01 ಕ್ಕೆ ಚಾಸಾ-5, 6 ಮತ್ತು 8 ರವರುಗಳು ಸಹಿ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**